**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿಯವರ ನ್ಯಾಯಾಲಯ, ಪೊನ್ನಂಪೇಟೆ.**

**ಕ್ರಿ.ಮೊ.ಸಂಖ್ಯೆ:921/2020**

| | | |
|---|---|---|
| **ಪಿರ್ಯಾದುದಾರರು:** | : | ರಾಜ್ಯ ಸರ್ಕಾರ,<br>ಅಬಕಾರಿ ನಿರೀಕ್ಷಕರು,<br>ವಿರಾಜಪೇಟೆ ವಲಯ, ವಿರಾಜಪೇಟೆ. |
| | | **ವಿರುದ್ಧ** |
| **ಆರೋಪಿಗಳು:** | 1. | ಶ್ರೀ ಪಿ.ಎಮ್.ರಾಮು,<br>ತಂದೆ: ಪೌತಿ ಮಾರ,<br>ಪ್ರಾಯ: 53 ವರ್ಷ,<br>ವಾಸ: ಆಯಿರಸುಳಿ ಗ್ರಾಮ,<br>ತಿತಿಮತಿ ಅಂಚೆ, ವಿರಾಜಪೇಟೆ ತಾಲ್ಲೂಕು,<br>ಕೊಡಗು ಜಿಲ್ಲೆ. |
| | 2. | ಶ್ರೀ ಸಂಜು,<br>ತಂದೆ: ಪೌತಿ ರಾಜು,<br>ಪ್ರಾಯ: 36 ವರ್ಷ,<br>ವಾಸ: ತಿತಿಮತಿ ಗ್ರಾಮ ಮತ್ತು ಅಂಚೆ,<br>ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ. |

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಶ್ನೆ ಸಂಖ್ಯೆ - 1 :** ಇದುವರೆವಿಗೂ ಅಭಿಯೋಜನೆ ಪರ ಸಾಕ್ಷ್ಯ ನುಡಿದ ಸಾಕ್ಷಿಗಳ ಸಾಕ್ಷ್ಯವನ್ನು ಆಲಿಸಿದ್ದೀರಾ?
ಉ: ಔದು

**ಪ್ರಶ್ನೆ ಸಂಖ್ಯೆ - 2.** ಪ್ರಾ.ಸಾ.1/ಚಾ.ಸಾ.1 ಅನಂತ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ:28.04.2020 ರಂದು ಅವರು ಆನೆಚೌಕೂರು ವನ್ಯ ಜೀವಿ ವಲಯದ ಚೇಣಿ ಅಡ್ಲು ಆಯಿರಾಸುಳಿಯಲ್ಲಿ ಚಾ.ಸಾ.1 ರವರ ಜೊತೆ ಆನೆ ಪಹರೆ ಮಾಡುತ್ತಿರುವಾಗ ಅವರಿಗೆ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದ ಮೇರೆಗೆ ಅವರ ಅಧಿಕಾರಿಯವರು ಅಬಕಾರಿ ನಿರೀಕ್ಷಕರವರಿಗೆ ವಿಷಯ ತಿಳಿಸಿರುತ್ತಾರೆ. ನಂತರ ಸಂಜೆ 7.30ಕ್ಕೆ ಅವರು ಮತ್ತು ಅಬಕಾರಿ ನಿರೀಕ್ಷಕರವರು ಕಾಯುತ್ತಿರುವಾಗ ಆರೋಪಿಗಳಾದ ನೀವುಗಳು ಬಂದಿರುತ್ತೀರಿ, ನಿಮ್ಮನ್ನು ಮಾತನಾಡಿಸಲು ಪ್ರಯತ್ನಿಸಿದಾಗ ಓಡಲು ಪ್ರಯತ್ನಿಸಿದ ನಿಮ್ಮನ್ನು ಹಿಡಿದಿರುತ್ತಾರೆ. 1ನೇ ಆರೋಪಿಯಾದ ನಿಮ್ಮ ಕೈಯಲ್ಲಿದ್ದ ವೈರ್ ಬ್ಯಾಗ್ ಅನ್ನು ಪರಿಶೀಲಿಸಿದಾಗ, ಅದರಲ್ಲಿದ್ದ ಒಂದು ಪ್ಲಾಸ್ಟಿಕ್ ಕ್ಯಾನಿನಲ್ಲಿ ಕಳ್ಳಭಟ್ಟಿ ಸಾರಾಯಿ ಇರುತ್ತದೆ. ನಂತರ ಕ್ಯಾನ್ ನಿಂದ ಸ್ಯಾಂಪಲ್ ತಗೆದು ಬಾಟಲ್ ಗೆ ಹಾಕಿರುತ್ತಾರೆ. ನಂತರ ಆರೋಪಿಗಳಾದ ನೀವುಗಳು ಸಾರಾಯಿ ಮಾರಾಟ ಮಾಡಲು ಬಂದಿರುವುದಾಗಿ ತಿಳಿಸಿರುತ್ತೀರಿ. ನಂತರ ಅಬಕಾರಿ ನಿರೀಕ್ಷಕರು ಮಹಜರ್ ಅನ್ನು ಲೈಟ್‌ಗಳ ಸಹಾಯದಿಂದ ಬರೆದಿರುತ್ತಾರೆ. ಸದರಿ ಮಹಜರ್ ಗೆ ಚಾ.ಸಾ.1 ರವರು ಸಹಿ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ - 3.** ಪ್ರಾ.ಸಾ.2/ಚಾ.ಸಾ.7 ಶ್ರೀಮತಿ ಭಾಗ್ಯ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿ. 28.04.2020 ರಂದು ಅವರು ಸಿಬ್ಬಂದಿಗಳೊಡನೆ ತಿತಿಮತಿ ಮುಖ್ಯ ರಸ್ತೆಯಲ್ಲಿ ಗಸ್ತು ತಿರುಗುತ್ತಿರುವಾಗ, ಚಾ.ಸಾ.2 ರವರು ದೂರವಾಣಿ ಕರೆ ಮಾಡಿ ಇಬ್ಬರು ವ್ಯಕ್ತಿಗಳು ಕಳ್ಳಭಟ್ಟಿ ಸಾಗಣೆ ಮಾಡುತ್ತಿರುವುದಾಗಿ ಮಾಹಿತಿ ನೀಡಿದ ಮೇರೆಗೆ ತಿತಿಮತಿ ಮುಖ್ಯ ರಸ್ತೆಯಲ್ಲಿ ಕಾಯುತ್ತಿರುವಾಗ, ಕಾಡಿನೊಳಗಿನಿಂದ ಆರೋಪಿಗಳಾದ ನೀವುಗಳು ಬಂದಿದ್ದು ನಿಮ್ಮನ್ನು ಹಿಡಿದಿರುತ್ತಾರೆ. ನಂತರ ಶೋಧನಾ ವಾರೆಂಟ್ ಪಡೆಯಲು ಸಮಯವಕಾಶ ಇಲ್ಲದ ಕಾರಣ ಸ್ಥಳದಲ್ಲಿ ಶೋಧನಾ ವಾರೆಂಟ್ ಅನ್ನು ತಯಾರಿಸಿ 1ನೇ ಆರೋಪಿಯಾದ ತಮ್ಮ ಬಳಿ ಇದ್ದ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ ಸುಮಾರು 4 ಲೀಟರ್ ನಷ್ಟು ಕಳ್ಳಭಟ್ಟಿ ಸಾರಾಯಿ ಕಂಡು ಬಂದಿರುತ್ತದೆ. ಅದರಿಂದ 180 ಮಿಲಿಯಷ್ಟು ಕಳ್ಳಭಟ್ಟಿ ತೆಗೆದುಕೊಂಡು ಮಾದರಿ ಪರೀಕ್ಷೆಗಾಗಿ ಬಿಳಿ ಬಟ್ಟೆಯಿಂದ ಸುತ್ತಿ ಇಲಾಖಾ ಸೀಲು ಮಾಡಿ, ನಂತರ ಸಂಜೆ 7.30 ರಿಂದ 9.00 ಗಂಟೆಯ ತನಕ ವಾಹನದ ಹೆಡ್ ಲೈಟ್ ನ ಸಹಾಯದಿಂದ ಮಹಜರ್ ಕ್ರಮ ಜರುಗಿಸಿ ಮುಂದಿನ ಕ್ರಮಕ್ಕಾಗಿ ಠಾಣೆಗೆ ಬಂದು ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತಾರೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾ.ಸಾ,9 ರವರಿಗೆ ವರ್ಗಾಯಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ - 4.** ಪ್ರಾ.ಸಾ.3/ಚಾ.ಸಾ.9 ಬಿ.ಎಸ್.ಮೋಹನ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ12.06.2020 ರಂದು ರಾಸಾಯನಿಕ ವಿಶ್ಲೇಷಣೆಗಾಗಿ ಮಾದರಿ ತೆಗೆದ ಕಳ್ಳಭಟ್ಟಿಯನ್ನು ಚಾ.ಸಾ.6 ರವರ ಮೂಲಕ ಬೆಂಗಳೂರಿಗೆ ಕಳುಹಿಸಿ ದಿಃ13.07.2020 ರಂದು ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ. ನಂತರ ಸಾಕ್ಷಿ 1 ರಿಂದ 5 ರವರುಗಳ ಹೇಳಿಕೆಗಳನ್ನು ಪಡೆದಿರುತ್ತಾರೆ. ನಂತರ ದಿಃ29.09.2020 ರಂದು ಆರೋಪಿಗಳಾದ ತಮ್ಮ ವಿರುದ್ಧ ಆರೋಪ ಸಾಬೀತಾದ ಕಾರಣ ದೋಷರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ - 5.** ಪ್ರಾ.ಸಾ.4/ಚಾ.ಸಾ.2 ಶ್ರೀ ಶಿವಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ದಿಃ28.04.2020 ರಂದು ರಾತ್ರಿ ಗಸ್ತಿನಲ್ಲಿರುವಾಗ, ಆರೋಪಿತರಾದ ನೀವುಗಳು ಕಾಡಿನೊಳಗಿಂದ ಒಂದು ಬ್ಯಾಗನ್ನು ಹಿಡಿದುಕೊಂಡು ಬಂದಿದ್ದು, ನಿಮ್ಮನ್ನು ವಿಚಾರಿಸಿದಾಗ, ಬ್ಯಾಗಿನಲ್ಲಿರುವುದು ಸಾರಾಯಿ ಎಂದು ತಿಳಿಸಿರುತ್ತೀರಿ. ನಂತರ ಅವರು ಅವರ

ಮೇಲಾಧಿಕಾರಿಗಳಿಗೆ, ಅಬಕಾರಿ ಇಲಾಖೆಯವರಿಗೆ ವಿಚಾರವನ್ನು ತಿಳಿಸಿರುತ್ತಾರೆ. ನಂತರ ಅಬಕಾರಿ ಇಲಾಖೆಯವರು ಬಂದು ಮುಂದಿನ ಕ್ರಮ ಕೈಗೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಏನು ಹೇಳಬಯಸುವಿರಿ?

ಉಃ ಸುಳ್ಳು

**ಪ್ರಶ್ನೆ ಸಂಖ್ಯೆ -6 :** ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ದಾಖಲಾತಿ ಹಾಜರುಪಡಿಸಲು ಬಯಸುವಿರಾ?

ಉತ್ತರಃ ಇಲ್ಲ

**ಪ್ರಶ್ನೆ ಸಂಖ್ಯೆ - 7 :** ಈ ಪ್ರಕರಣದಲ್ಲಿ ನೀವೇನಾದರೂ ಹೇಳಬಯಸುವಿರಾ?

ಉತ್ತರಃ ಇಲ್ಲ

ತೆರೆದ ನಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆಕೆಯು ನೀಡಿದ ಉತ್ತರಗಳನ್ನು ದಿಃ10-02-2026 ರಂದು ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು).

**ಸ್ಥಳಃ ಪೊನ್ನಂಪೇಟೆ**
**ದಿಃ10.02.2026.**

**ಶ್ರೀನಾಥ್ ಎ**
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.**
**ಪೊನ್ನಂಪೇಟೆ.**

ಪ್ರ.3. ಪ್ರಾ.ಸಾ.2 ಫಯಾಜ್ ಇವರು ತಮ್ಮ ಸಾಕ್ಷ್ಯದಲ್ಲಿ ನುಡಿಯುತ್ತಾ, ಆರೋಪಿಯ ಪರಿಚಯವಿದೆ. ನಿ.ಪಿ.1ಸ್ವತ್ತು ಅಮಾನತ್ತು ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನಿ.ಪಿ. 1 ಎ ಎಂದು ಗುರ್ತಿಸಿರುತ್ತಾರೆ. ನಿ.ಪಿ.2 ಕೃತ್ಯ ಸ್ಥಳದ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನಿ ಪಿ 2 ಎ ಎಂದು ಗುರ್ತಿಸಿರುತ್ತಾರೆ, ನಿ.ಪಿ.3 ಸ್ವತ್ತು ಅಮಾನತ್ತು ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನಿ ಪಿ 3 ಎ ಎಂದು ಗುರ್ತಿಸಿರುತ್ತಾರೆ. ನಿ.ಪಿ.4 ಸ್ವತ್ತು ಬಿಡುಗಡೆ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ನಿ ಪಿ 4ಎ ಎಂದು ಗುರ್ತಿಸಿರುತ್ತಾರೆ. ಸದರಿ ದಾಖಲೆಗಳಿಗೆ ಬಾಳೆಲೆ ಗ್ರಾಮದಲ್ಲಿ ಸಹಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉಃ